ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 514
ಸದಸ್ಯರ ಹೆಸರು	: ಶ್ರೀ ಡಾ॥ ಚಂದ್ರಶೇಖರ್ ಬಿ. ಪಾಟೀಲ್
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 05.02.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಬಸ್ಸುಗಳಿಗೆ ಕಳೆದ ಒಂದು ವರ್ಷದಲ್ಲಿ ಎಷ್ಟು ಹಣ ಟೋಲ್ ಫೀಸ್ ಕಟ್ಟಲಾಗಿದೆ;	ಸರ್ಕಾರಿ ಬಸ್ಸುಗಳಿಗೆ ಕಳೆದ ಒಂದು ವರ್ಷದಲ್ಲಿ ಕಟ್ಟಲಾದ ಟೋಲ್ ಫೀಸ್ ಮೊತ್ತದ ವಿವರ ಈ ಕೆಳಕಂಡಂತಿದೆ: (ರೂ. ಕೋಟಿಗಳಲ್ಲಿ) ಸಾರಿಗೆ ಸಂಸ್ಥೆ — ಟೋಲ್ ಫೀಸ್ ಮೊತ್ತ ಕ.ರಾ.ರ.ಸಾ.ನಿಗಮ — 77.46 ಬೆಂ.ಮ.ಸಾ.ಸಂಸ್ಥೆ — 8.12 ವಾ.ಕ.ರ.ಸಾ.ಸಂಸ್ಥೆ — 34.44 ಈ.ಕ.ರ.ಸಾ.ಸಂಸ್ಥೆ — 26.38 **ಒಟ್ಟು: — 146.40**
ಆ)	ಸಾರಿಗೆ ಇಲಾಖೆಯ ನಾಲ್ಕು ನಿಗಮಗಳು ನಷ್ಟದಲ್ಲಿ ನಡೆಯುತ್ತಿರುವುದು ನಿಜವೇ;	ಹೌದು. ನಾಲ್ಕೂ ಸಾರಿಗೆ ಸಂಸ್ಥೆಗಳಾದ ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಮತ್ತು ಈ.ಕ.ರ.ಸಾ.ಸಂಸ್ಥೆಗಳು ನಷ್ಟದಲ್ಲಿರುತ್ತವೆ.
ಇ)	ಇಲಾಖೆಯಲ್ಲಿ ಅಂತರ ನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?	ಹೌದು. ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳು ಸ್ವತಂತ್ರ ನಿಗಮಗಳಾಗಿದ್ದು, ದರ್ಜೆ–3 ಮೇಲ್ವಿಚಾರಕೇತರ ಹಾಗೂ ದರ್ಜೆ–4 ಸಿಬ್ಬಂದಿಗಳಿಗೆ ಅಂತರನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸುವ ಕುರಿತು ಪರಿಶೀಲಿಸಲು ನಾಲ್ಕೂ ಸಾರಿಗೆ ನಿಗಮಗಳ ಮಟ್ಟದಲ್ಲಿ ಸಮಿತಿಯನ್ನು ರಚಿಸಿದ್ದು, ಸಮಿತಿಯು ವರದಿಯನ್ನು ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.

...2

ಈ) ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371ಜೆ ಜಾರಿಯಾದ ಮೇಲೆ ಆ ಭಾಗದಲ್ಲಿ ಎಷ್ಟು ಹುದ್ದೆಗಳನ್ನು ಸಾರಿಗೆ ಇಲಾಖೆಯಲ್ಲಿ ಭರ್ತಿ ಮಾಡಲಾಗಿದೆ;

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371ಜೆ ಜಾರಿಯಾದ ಮೇಲೆ ಆ ಭಾಗದಲ್ಲಿ ಸಾರಿಗೆ ಇಲಾಖೆಯಲ್ಲಿ ಭರ್ತಿ ಮಾಡಿರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

ಸಂಸ್ಥೆಗಳು	ಗುರುತಿಸಿದ /ಹಂಚಿಕೆ ಮಾಡಲಾದ ಹುದ್ದೆಗಳು		ಭರ್ತಿ ಮಾಡಲಾದ ಹುದ್ದೆಗಳು		ಖಾಲಿ ಹುದ್ದೆಗಳು	
	ಮುಂಬಡ್ತಿ	ನೇರ ನೇಮಕಾತಿ	ಮುಂಬಡ್ತಿ	ನೇರ ನೇಮಕಾತಿ	ಮುಂಬಡ್ತಿ	ನೇರ ನೇಮಕಾತಿ
ಸಾರಿಗೆ ಇಲಾಖೆ	101	194	57	89	**44**	**105**
ಕ.ರಾ.ರ.ಸಾ. ನಿಗಮ	534	205	230	81	**304**	**124**
ಬೆಂ.ಮ.ಸಾ. ಸಂಸ್ಥೆ	277	2633	202	2606	**75**	**27**
ಈ.ಕ.ರ.ಸಾ. ಸಂಸ್ಥೆ	1897	14844	1592	13920	**305**	**924**

ಸಾರಿಗೆ ಇಲಾಖೆ – 36 ನೇರ ನೇಮಕಾತಿ ಹುದ್ದೆಗಳ ಭರ್ತಿಗಾಗಿ ಕೆ.ಪಿ.ಎಸ್.ಸಿ.ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಉ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕ.ರಾ.ರ.ಸಾ.ನಿಗಮ – ರಾಜ್ಯ ಮಟ್ಟದ ಹುದ್ದೆಗಳಲ್ಲಿ ಪ್ರಸ್ತುತ 371 ಜೆ ಮುಂಬಡ್ತಿಗೆ ಮೀಸಲಾದ ಒಟ್ಟು 304 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕೋವಿಡ್–19ರ ಹಿನ್ನೆಲೆಯಲ್ಲಿ ಮುಂಬಡ್ತಿ ಪ್ರಕ್ರಿಯೆ ವಿಳಂಬವಾಗಿರುತ್ತದೆ.

ಬೆಂ.ಮ.ಸಾ.ಸಂಸ್ಥೆ – ಅರ್ಹ ಅಭ್ಯರ್ಥಿ/ಉದ್ಯೋಗಿಗಳ ಅಲಭ್ಯತೆಯಿಂದಾಗಿ ಖಾಲಿ ಇರುವ ಹುದ್ದೆಗಳು ಬಾಕಿ ಉಳಿದಿರುತ್ತವೆ.

ಈ.ಕ.ರ.ಸಾ.ಸಂಸ್ಥೆ – ಮುಂಬಡ್ತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಪ್ರಸ್ತುತ ಕೋವಿಡ್–19 ಪಿಡುಗಿನಿಂದಾಗಿ ಉಂಟಾದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020 ದಿನಾಂಕ: 06.07.2020ರಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿದಿರುವುದರಿಂದ, ನೇರ ನೇಮಕಾತಿಗೆ ಅನುಮತಿ ದೊರೆತ ನಂತರ, ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿಗೊಳಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 41 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು